Government of Karnataka

# KARNATAKA EXAMINATIONS AUTHORITY

BANGALORE

**No.ED/KEA/Legal Cell/CR-71/ADV-01/2008-09** **Dated: 05-02-2009**

# ADMISSION TO PROFESSIONAL COURSES IN KARNATAKA FOR THE YEAR 2009-10

1. Applications are invited from eligible candidates of Karnataka including the wards of Jammu & Kashmiri migrants for registration for the "**Common Entrance Test-2009**" for admissions to first year Medical / Dental / Ayurveda / Homoeopathy / Unani / Naturopathy & Yoga / Engineering / Technology / Architecture courses **for the seats to be notified by the Government** in the Professional Educational Institutions in the state of Karnataka for the academic year 2009-10.
2. A candidate must appear for the Common Entrance Test conducted by the Karnataka Examinations Authority, for PCB subjects in case of admission to Medical / Dental / Ayurveda / Homoeopathy / Unani / Naturopathy & Yoga courses and PCM subjects in case of admission to Engineering / Technology courses. For admission to Architecture course the candidate must appear for NATA (National Aptitude Test in Architecture) conducted by the Council of Architecture. (Visit KEA website for list of institutions conducting NATA)
3. The merit will be determined in accordance with the provision of the "Karnataka Selection of Candidates for Admission to Government Seats in Professional Educational Institutions Rules, 2006".
4. **Academic Eligibility:**

   **(a)** For Medical / Dental courses, the applicant should have passed Karnataka 2nd PUC / 12th std. or equivalent examination with Physics, Chemistry and Biology as optional subjects and with English as one of the languages of study and have obtained a minimum of 50% of marks in aggregate in the PCB group and should secure a minimum of 50% of marks in aggregate in PCB subjects in the Common Entrance Test. In case of candidates belonging to Scheduled Castes, Scheduled Tribes and Other Backward Classes (Category-1, 2A, 2B, 3A and 3B), the minimum marks for the purpose of eligibility will be 40% of marks in aggregate in PCB group both in Qualifying Examination and Common Entrance Test.

   **(b)** For Ayurveda / Homoeopathy / Unani / Naturopathy & Yoga courses, the applicant should have passed Karnataka 2nd PUC/ 12th std. or equivalent examination with Physics, Chemistry and Biology as optional subjects and with English as one of the languages of study and have obtained a minimum of 50% of marks in aggregate in PCB group irrespective of marks obtained in the Common Entrance Test. In case of candidates belonging to Scheduled Castes, Scheduled Tribes and Other Backward Classes (Category-1, 2A, 2B, 3A and 3B), the minimum marks for the purpose of eligibility will be 40% of marks in aggregate in PCB group in the qualifying examination.

   For admission to Medical / Dental / Ayurveda / Homoeopathy / Unani / Naturopathy & Yoga courses, the candidate should have completed the age of 17 years as on 31st of December 2009.

   **(c)** For Engineering / Technology courses, the applicant should have passed Karnataka 2nd PUC / 12th Std. or equivalent examination with Physics and Mathematics along with Chemistry / Bio-Technology / Computer Science / Electronics / Biology as optional subjects with English as one of the languages of study and obtained a minimum of 45% of marks in aggregate in the optional subjects, irrespective of marks obtained in the Common Entrance Test. In case of candidates belonging to Scheduled Castes, Scheduled Tribes and Other Backward Classes (Category-1, 2A, 2B, 3A and 3B), the minimum marks for the purpose of eligibility will be 40% of marks in aggregate in the optional subjects in the qualifying examination.

   **(d)** For Architecture course, the applicant should have passed Karnataka 2nd PUC / 12th Std. or equivalent examination with Mathematics as a compulsory optional subject and obtained a minimum of 50% of marks in aggregate in all the subjects in the qualifying examination [45% of marks in case of candidates belonging to Scheduled Castes, Scheduled Tribes and Other Backward Classes (Category-1, 2A, 2B, 3A and 3B)] and should compulsorily appear for NATA (National Aptitude Test in Architecture) and get a minimum of 40% in it. (Including Scheduled Castes, Scheduled Tribes and Other Backward Classes)

   **IMPORTANT NOTE:**

   1. A candidate who had obtained a seat in any discipline through the KEA (CET Cell) in any of the previous years will not be eligible to appear for the Common Entrance Test-2009 for selection of a seat in the same discipline. Such candidate will immediately forfeit the seat selected by him during the previous years, upon selection of a seat in a different discipline during the year.
   2. The merit list of candidates for admission to Medical and Dental courses will be determined only on the basis of marks obtained by candidates in PCB subjects, taken together, in the Common Entrance Test. For Ayurveda / Homoeopathy / Unani / Naturopathy & Yoga / Engineering / Technology courses, the merit list will be determined on the basis of marks obtained in the respective optional subjects, in both qualifying examination and the Common Entrance Test taken in equal proportions. For Architecture course, the Merit list will be determined on the basis of marks obtained in both qualifying examination and NATA taken in equal proportions.

5. **SUPPLY OF BROCHURE CUM APPLICATION FORM:**

   Brochure cum application form will be supplied through the schools / colleges located within the State of Karnataka in which the students are studying 2nd PUC or 12th standard examination upon submission of Demand Draft for **Rs. 550/-** to the Principals in advance, drawn in favour of **"The Executive Director, Karnataka Examinations Authority, Bangalore"**, payable at Bangalore and **Rs. 400/-** for students belonging to Scheduled Castes, Scheduled Tribes and Category-1. The repeater and ex-students who have passed the qualifying examination within the State of Karnataka before 2009 should also submit the demand draft for the above said amount to the respective schools / colleges. The Last date for submission of Demand Draft to the Principal of Schools and Colleges within Karnataka will be **10-02-2009**.

   The Karnataka candidates residing outside Karnataka (i.e., Horanadu, Gadinadu and other Karnataka candidates) who are studying or who have studied 12th standard or equivalent examination outside the State of Karnataka, within the territory of India, can procure the brochure cum application form by "**SPEED POST**", by sending a self-addressed cloth-lined envelope of size 25 cm X 30 cm along with a Demand Draft for **Rs. 650/-** drawn in favour of **"The Executive Director, Karnataka Examinations Authority, Bangalore"**, payable at Bangalore and a Karnataka candidate residing outside India can get the brochure cum application form by sending a demand draft for **Rs. 3000/-**. The contents on the self-addressed envelope should be in English or Kannada language only. The cover in which the demand draft and self-addressed envelope are sent should be boldly superscribed with the words "REQUEST FOR CET-2009 BROCHURE" and should be sent to the following address of Executive Director by "Speed Post" ONLY. The **KEA** will not take responsibility for the envelopes sent through courier or given in person or through any other private arrangement and also for incomplete and insufficient address on the envelope. The last date for submission of Demand Drafts by "Speed Post" will be **16-02-2009**.

## THE COMMON ENTRANCE TEST - 2009 TIME TABLE

| DATE | DAY | TIMINGS | SUBJECT | MARKS |
|---|---|---|---|---|
| 29-04-2009 | WEDNESDAY | 10.30 AM – 11.50 AM | BIOLOGY | 60 |
| | | 02.30 PM – 03.50 PM | MATHEMATICS | 60 |
| 30-04-2009 | THURSDAY | 10.30 AM – 11.50 AM | PHYSICS | 60 |
| | | 02.30 PM – 03.50 PM | CHEMISTRY | 60 |
| 01-05-2009 | FRIDAY | KANNADA LANGUAGE TEST, ONLY FOR → | GADINADU KANNADIGA CANDIDATES | 11.00 a.m. |
| | | | HORANADU KANNADIGA CANDIDATES | 01.00 p.m. |

For more details regarding various conditions to claim eligibility for Government seats, visit KEA Website: http://kea.kar.nic.in

**S.G. HEGDE** IAS
Executive Director

Sampige Road, 18th Cross, Malleshwaram, Bangalore 560 012.
Phone: 080-23461575, 23462758, 23462599 Fax: 080- 23461576 E-mail: keauthority-ka@nic.in

ಕರ್ನಾಟಕ ಸರ್ಕಾರ

# ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಬೆಂಗಳೂರು

ನಂ.ಇಡಿ/ಕೆಇಎ/ಲೀಗಲ್ ಸೆಲ್/ಸಿಆರ್-71/ಎಡಿವಿ-01/2008-09 ದಿನಾಂಕ: 05-02-2009

# 2009-10ನೇ ಸಾಲಿಗೆ ಕರ್ನಾಟಕದ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ

1. ಕರ್ನಾಟಕ ರಾಜ್ಯದಲ್ಲಿರುವ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಮೊದಲನೇ ವರ್ಷದ ವೈದ್ಯಕೀಯ / ದಂತ ವೈದ್ಯಕೀಯ / ಆಯುರ್ವೇದ / ಹೋಮಿಯೋಪತಿ / ಯುನಾನಿ / ನ್ಯಾಚುರೋಪತಿ ಮತ್ತು ಯೋಗ / ಇಂಜಿನಿಯರಿಂಗ್ / ಟೆಕ್ನಾಲಜಿ /ಆರ್ಕಿಟೆಕ್ಚರ್ ಕೋರ್ಸುಗಳಿಗೆ 2009-10ನೇ ಶೈಕ್ಷಣಿಕ ವರ್ಷಕ್ಕೆ ಸರ್ಕಾರವು ನಿಗದಿಪಡಿಸುವ ಸೀಟುಗಳ ಪ್ರವೇಶಕ್ಕಾಗಿ ನಡೆಸಲಾಗುವ **ಸಾಮಾನ್ಯ ಪ್ರವೇಶ ಪರೀಕ್ಷೆ 2009**ಕ್ಕೆ ಕರ್ನಾಟಕದ ಅರ್ಹ ಅಭ್ಯರ್ಥಿಗಳಿಂದ ಹಾಗೂ ಜಮ್ಮು ಮತ್ತು ಕಾಶ್ಮೀರಿ ವಲಸೆಗಾರರ ಅಭ್ಯರ್ಥಿಗಳಿಂದಲೂ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
2. ಅಭ್ಯರ್ಥಿಯು ವೈದ್ಯಕೀಯ / ದಂತ ವೈದ್ಯಕೀಯ / ಆಯುರ್ವೇದ / ಹೋಮಿಯೋಪತಿ / ಯುನಾನಿ / ನ್ಯಾಚುರೋಪತಿ ಮತ್ತು ಯೋಗ ಕೋರ್ಸುಗಳ ಪ್ರವೇಶಕ್ಕಾಗಿ ಪಿಸಿಬಿ ವಿಷಯಗಳ ಪರೀಕ್ಷೆಗೆ ಹಾಗೂ ಇಂಜಿನಿಯರಿಂಗ್ / ಟೆಕ್ನಾಲಜಿ ಕೋರ್ಸುಗಳ ಪ್ರವೇಶಕ್ಕಾಗಿ ಪಿಸಿಎಂ ವಿಷಯಗಳ ಪರೀಕ್ಷೆಗೆ ಕ.ಪ.ಪ್ರಾ. ನಡೆಸುವ **ಸಾಮಾನ್ಯ ಪ್ರವೇಶ ಪರೀಕ್ಷೆಗೆ** ಕಡ್ಡಾಯವಾಗಿ ಹಾಜರಾಗಬೇಕು. ಆರ್ಕಿಟೆಕ್ಚರ್ ಕೋರ್ಸ್‌ನ ಪ್ರವೇಶಕ್ಕಾಗಿ ಕೌನ್ಸಿಲ್ ಆಫ್ ಆರ್ಕಿಟೆಕ್ಚರ್‌ನವರು ನಡೆಸುವ NATA (National Aptitude Test in Architecture)ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು. (NATA ನಡೆಸುವ ಸಂಸ್ಥೆಗಳ ಪಟ್ಟಿಗಾಗಿ ಕ.ಪ.ಪ್ರಾ. ವೆಬ್‌ಸೈಟ್‌ನ್ನು ನೋಡಿರಿ)
3. ಅಭ್ಯರ್ಥಿಗಳ ಪ್ರವೇಶಾರ್ಹತೆಯನ್ನು Karnataka Selection of Candidates for Admission to Government Seats in Professional Educational Institutions Rules, 2006 ರಲ್ಲಿನ ನಿಯಮಾವಳಿಗಳ ಅನ್ವಯ ನಿರ್ಧರಿಸಲಾಗುತ್ತದೆ.
4. **ಶೈಕ್ಷಣಿಕ ಅರ್ಹತೆ:**

   (ಎ) ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ಅಭ್ಯರ್ಥಿಯು ಕರ್ನಾಟಕದ ಎರಡನೇ ಪಿಯುಸಿ/12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರಗಳನ್ನು ಐಚ್ಛಿಕ ವಿಷಯಗಳನ್ನಾಗಿ ಹಾಗೂ ಇಂಗ್ಲೀಷನ್ನು ಒಂದು ಭಾಷಾ ವಿಷಯವನ್ನಾಗಿ ಅರ್ಹತಾ ಪರೀಕ್ಷೆಯ ಪಿಸಿಬಿ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 50ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು ಮತ್ತು **ಸಾಮಾನ್ಯ ಪ್ರವೇಶ ಪರೀಕ್ಷೆ**ಯ ಪಿಸಿಬಿ ವಿಷಯಗಳಲ್ಲಿಯೂ ಒಟ್ಟಾರೆ ಕನಿಷ್ಠ ಶೇಕಡ 50ರಷ್ಟು ಅಂಕಗಳನ್ನು ಪಡೆದಿರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ (ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿಗಳಿಗೆ ಸೇರಿರುವ ಅಭ್ಯರ್ಥಿಗಳು) ಸೇರಿರುವ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆ ಮತ್ತು **ಸಾಮಾನ್ಯ ಪ್ರವೇಶ ಪರೀಕ್ಷೆ**ಯ ಪಿಸಿಬಿ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 40ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು..

   (ಬಿ) ಆಯುರ್ವೇದ / ಹೋಮಿಯೋಪತಿ / ಯುನಾನಿ / ನ್ಯಾಚುರೋಪತಿ ಮತ್ತು ಯೋಗ ಕೋರ್ಸುಗಳ ಪ್ರವೇಶಕ್ಕಾಗಿ ಅಭ್ಯರ್ಥಿಯು ಕರ್ನಾಟಕದ ಎರಡನೇ ಪಿಯುಸಿ / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರಗಳನ್ನು ಐಚ್ಛಿಕ ವಿಷಯಗಳನ್ನಾಗಿ ಹಾಗೂ ಇಂಗ್ಲೀಷನ್ನು ಒಂದು ಭಾಷಾ ವಿಷಯವನ್ನಾಗಿ ತೆಗೆದುಕೊಂಡು ಅರ್ಹತಾ ಪರೀಕ್ಷೆಯ ಪಿಸಿಬಿ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 50ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯ ಪಿಸಿಬಿ ವಿಷಯಗಳಲ್ಲಿ ಇಂತಿಷ್ಟೇ ಅಂಕಗಳನ್ನು ಪಡೆಯಬೇಕೆಂಬ ನಿಯಮವಿರುವುದಿಲ್ಲ. ಪರಿಶಿಷ್ಟ ಜಾತಿ , ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ (ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿಗಳಿಗೆ ಸೇರಿರುವ ಅಭ್ಯರ್ಥಿಗಳು) ಸೇರಿರುವ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯ ಪಿಸಿಬಿ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 40ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು.

   ವೈದ್ಯಕೀಯ / ದಂತ ವೈದ್ಯಕೀಯ / ಆಯುರ್ವೇದ / ಹೋಮಿಯೋಪತಿ / ಯುನಾನಿ / ನ್ಯಾಚುರೋಪತಿ ಮತ್ತು ಯೋಗ ಕೋರ್ಸುಗಳ ಪ್ರವೇಶಕ್ಕಾಗಿ ಅಭ್ಯರ್ಥಿಯು **31-12-2009**ರ ದಿನಾಂಕಕ್ಕೆ ಅನ್ವಯವಾಗುವಂತೆ 17 ವರ್ಷ ವಯಸ್ಸನ್ನು ಪೂರ್ಣಗೊಳಿಸಿರಬೇಕು.

   (ಸಿ) ಇಂಜಿನಿಯರಿಂಗ್ / ಟೆಕ್ನಾಲಜಿ ಕೋರ್ಸುಗಳ ಪ್ರವೇಶಕ್ಕಾಗಿ ಅಭ್ಯರ್ಥಿಯು ಕರ್ನಾಟಕದ ಎರಡನೇ ಪಿಯುಸಿ / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರ ವಿಷಯಗಳ ಜೊತೆಗೆ ರಸಾಯನಶಾಸ್ತ್ರ/ ಬಯೋ-ಟೆಕ್ನಾಲಜಿ / ಕಂಪ್ಯೂಟರ್ ಸೈನ್ಸ್/ ಎಲೆಕ್ಟ್ರಾನಿಕ್ಸ್/ ಜೀವಶಾಸ್ತ್ರಗಳಲ್ಲಿ ಯಾವುದಾದರೂ ಒಂದನ್ನು ಐಚ್ಛಿಕ ವಿಷಯವನ್ನಾಗಿ ಹಾಗೂ ಇಂಗ್ಲೀಷನ್ನು ಒಂದು ಭಾಷಾ ವಿಷಯವನ್ನಾಗಿ ತೆಗೆದುಕೊಂಡು ಅರ್ಹತಾ ಪರೀಕ್ಷೆಯ ಐಚ್ಛಿಕ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 45ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯ ಪಿಸಿಎಂ ವಿಷಯಗಳಲ್ಲಿ ಇಂತಿಷ್ಟೇ ಅಂಕಗಳನ್ನು ಪಡೆಯಬೇಕೆಂಬ ನಿಯಮವಿರುವುದಿಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ (ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿಗಳಿಗೆ ಸೇರಿರುವ ಅಭ್ಯರ್ಥಿಗಳು) ಸೇರಿರುವ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯ ಪಿಸಿಬಿ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 40ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು.

   (ಡಿ) ಆರ್ಕಿಟೆಕ್ಚರ್ ಕೋರ್ಸ್‌ನ ಪ್ರವೇಶಕ್ಕಾಗಿ ಅಭ್ಯರ್ಥಿಯು ಕರ್ನಾಟಕದ ಎರಡನೇ ಪಿಯುಸಿ / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಗಣಿತಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು ಅರ್ಹತಾ ಪರೀಕ್ಷೆಯ ಎಲ್ಲಾ ವಿಷಯಗಳಲ್ಲಿ ಒಟ್ಟಾರೆ ಕನಿಷ್ಠ ಶೇಕಡ 50ರಷ್ಟು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಶೇಕಡ45ರಷ್ಟು) ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು ಮತ್ತು ಕಡ್ಡಾಯವಾಗಿ NATA ಪರೀಕ್ಷೆಗೆ ಹಾಜರಾಗಿ ಕನಿಷ್ಠ ಶೇಕಡ 40ರಷ್ಟು [ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ (ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿಗಳಿಗೆ ಸೇರಿರುವ ಅಭ್ಯರ್ಥಿಗಳು) ಅಭ್ಯರ್ಥಿಗಳೂ ಸೇರಿದಂತೆ] ಅಂಕಗಳನ್ನು ಪಡೆದಿರಬೇಕು.

   **ಮುಖ್ಯ ಸೂಚನೆ:**

   1. ಕ.ಪ.ಪ್ರಾ (ಸಿಇಟಿ) ಮೂಲಕ ಈ ಹಿಂದಿನ ವರ್ಷಗಳಲ್ಲಿ ಯಾವುದಾದರೂ ವಿಭಾಗದಲ್ಲಿ ಸೀಟನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಈ ಬಾರಿ ಅದೇ ವಿಭಾಗದಲ್ಲಿ ಸೀಟನ್ನು ಆಯ್ಕೆ ಮಾಡಿಕೊಳ್ಳಲು ಸಾಮಾನ್ಯ ಪ್ರವೇಶ ಪರೀಕ್ಷೆ - 2009ಕ್ಕೆ ಹಾಜರಾಗಲು ಅರ್ಹರಿರುವುದಿಲ್ಲ. ಅಂತಹ ಅಭ್ಯರ್ಥಿಗಳು ಈ ವರ್ಷ ಬೇರೆ ವಿಭಾಗಗಳಲ್ಲಿ ಸೀಟನ್ನು ಆಯ್ಕೆ ಮಾಡಿಕೊಂಡಲ್ಲಿ ಅವರು ಹಿಂದಿನ ವರ್ಷಗಳಲ್ಲಿ ಆಯ್ಕೆ ಮಾಡಿಕೊಂಡಿದ್ದ ಸೀಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
   2. ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆಯ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಆಧರಿಸಿ, ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ರ್‍ಯಾಂಕ್ ಪಟ್ಟಿಯನ್ನು ಪ್ರಕಟಿಸಲಾಗುವುದು. ಅಭ್ಯರ್ಥಿಗಳು **ಸಾಮಾನ್ಯ ಪ್ರವೇಶ ಪರೀಕ್ಷೆ** ಮತ್ತು ಅರ್ಹತಾ ಪರೀಕ್ಷೆಗಳಲ್ಲಿ ಸಂಬಂಧಪಟ್ಟ ಐಚ್ಛಿಕ ವಿಷಯಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಸಮಾನವಾಗಿ ಗಣನೆಗೆ ತೆಗೆದುಕೊಂಡು, ಆಯುರ್ವೇದ / ಹೋಮಿಯೋಪತಿ / ಯುನಾನಿ /ನ್ಯಾಚುರೋಪತಿ ಮತ್ತು ಯೋಗ / ಇಂಜಿನಿಯರಿಂಗ್ / ಟೆಕ್ನಾಲಜಿ ಕೋರ್ಸುಗಳ ಪ್ರವೇಶಕ್ಕಾಗಿ ರ್‍ಯಾಂಕ್ ಪಟ್ಟಿಯನ್ನು ಪ್ರಕಟಿಸಲಾಗುವುದು. ಅಭ್ಯರ್ಥಿಗಳು NATA ಪರೀಕ್ಷೆ ಮತ್ತು ಅರ್ಹತಾ ಪರೀಕ್ಷೆಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಸಮಾನವಾಗಿ ಗಣನೆಗೆ ತೆಗೆದುಕೊಂಡು, ಆರ್ಕಿಟೆಕ್ಚರ್ ಕೋರ್ಸ್‌ನ ಪ್ರವೇಶಕ್ಕಾಗಿ ರ್‍ಯಾಂಕ್ ಪಟ್ಟಿಯನ್ನು ಪ್ರಕಟಿಸಲಾಗುವುದು.

5. **ಬ್ರೋಶರ್ ಮತ್ತು ಅರ್ಜಿ ನಮೂನೆ ವಿತರಣೆ:**

   ಕರ್ನಾಟಕ ರಾಜ್ಯದಲ್ಲಿರುವ ಶಾಲೆ ಮತ್ತು ಕಾಲೇಜುಗಳಲ್ಲಿ 12ನೇ ತರಗತಿ ಅಥವಾ ದ್ವಿತೀಯ ಪಿಯುಸಿ ಪರೀಕ್ಷೆಗೆ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳು ಮತ್ತು 2009ನೇ ಸಾಲಿಗೂ ಮುನ್ನ ಕರ್ನಾಟಕ ರಾಜ್ಯದ 12ನೇ ತರಗತಿ ಅಥವಾ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಪುನರಾವರ್ತಿತ (ರಿಪೀಟರ್) ಅಭ್ಯರ್ಥಿಗಳು ಹಾಗೂ ಹಳೆಯ ವಿದ್ಯಾರ್ಥಿಗಳು ಅವರ ಶಾಲಾ-ಕಾಲೇಜುಗಳ ಪ್ರಿನ್ಸಿಪಾಲರಿಗೆ '**ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು**' ಇವರ ಹೆಸರಿನಲ್ಲಿ ಪಡೆದ **ರೂ. 550/-**ರ ಮೊತ್ತದ ಡಿಮ್ಯಾಂಡ್ ಡ್ರಾಫ್ಟ್‌ನ್ನು ಮುಂಚಿತವಾಗಿ ಸಲ್ಲಿಸಿ ಬ್ರೋಶರ್ ಮತ್ತು ಅರ್ಜಿ ನಮೂನೆಗಳನ್ನು ಪಡೆಯಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1ಕ್ಕೆ ಸೇರಿರುವ ಅಭ್ಯರ್ಥಿಗಳು **ರೂ. 400/-**ರ ಮೊತ್ತದ ಡಿಮ್ಯಾಂಡ್ ಡ್ರಾಫ್ಟ್‌ನ್ನು ಸಲ್ಲಿಸಬೇಕು. ತಮ್ಮ ಶಾಲಾ-ಕಾಲೇಜುಗಳ ಪ್ರಿನ್ಸಿಪಾಲರಿಗೆ ಡಿಮ್ಯಾಂಡ್ ಡ್ರಾಫ್ಟ್‌ನ್ನು ಸಲ್ಲಿಸಲು ಕೊನೆಯ ದಿನಾಂಕ **10-02-2009.**

   ಕರ್ನಾಟಕವನ್ನು ಹೊರತುಪಡಿಸಿ ಇತರೆ ಯಾವುದೇ ಹೊರ ರಾಜ್ಯಗಳಲ್ಲಿ (ಭಾರತದ ಒಳಗೆ) 12ನೇ ತರಗತಿ ಅಥವಾ ತತ್ಸಮಾನ ತರಗತಿಯಲ್ಲಿ ವ್ಯಾಸಂಗ ಮಾಡಿದ ಅಥವಾ ಪರೀಕ್ಷೆಗೆ ಕುಳಿತ ಕರ್ನಾಟಕದ ಅಭ್ಯರ್ಥಿಗಳು, (ಹೊರನಾಡು ಕನ್ನಡಿಗ ಮತ್ತು ಇತರೆ ಕರ್ನಾಟಕದ ಅಭ್ಯರ್ಥಿಗಳು ಸೇರಿದಂತೆ) ಬ್ರೋಶರ್ ಮತ್ತು ಅರ್ಜಿ ನಮೂನೆಗಳನ್ನು **ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು** ಇವರ ಹೆಸರಿನಲ್ಲಿ ಪಡೆದ **ರೂ. 650/-**ರ ಮೊತ್ತದ ಡಿಮ್ಯಾಂಡ್ ಡ್ರಾಫ್ಟ್ ಜೊತೆಗೆ ಸ್ವ-ವಿಳಾಸದ 30 ಸೆಂ.ಮೀ. x 25 ಸೆಂ.ಮೀ. ಅಳತೆಯುಳ್ಳ ಕ್ಲಾತ್-ಲೈನ್ಡ್ ಲಕೋಟೆಯನ್ನು '**ಸ್ಪೀಡ್ ಪೋಸ್ಟ್**' ಮುಖಾಂತರ **ಕರ್ನಾಟಕ ಪರೀಕ್ಷಾ ಪ್ರಾಧಿಕಾರದ** ಕಛೇರಿಗೆ ಕಳುಹಿಸಿಕೊಟ್ಟು ಪಡೆಯಬಹುದು. ಭಾರತದ ಹೊರಗಿನ ಕರ್ನಾಟಕದ ಅಭ್ಯರ್ಥಿಗಳು **ರೂ. 3000/-** ಮೊತ್ತದ ಡಿಮ್ಯಾಂಡ್ ಡ್ರಾಫ್ಟ್‌ನ್ನು ಸಲ್ಲಿಸಬೇಕು. ಸ್ವ-ವಿಳಾಸದ ಲಕೋಟೆಯ ಮೇಲಿನ ಬರಹಗಳು ಕೇವಲ ಇಂಗ್ಲೀಷ್ ಅಥವಾ ಕನ್ನಡ ಭಾಷೆಯಲ್ಲಿರಬೇಕು. ಡಿಮ್ಯಾಂಡ್ ಡ್ರಾಫ್ಟ್ ಮತ್ತು ಸ್ವ-ವಿಳಾಸದ ಲಕೋಟೆಗಳನ್ನು ಲಗತ್ತಿಸಿದ ಕವರ್ ಮೇಲೆ **ಸಿಇಟಿ-2009 ಬ್ರೋಶರ್‌ಗಾಗಿ ಬೇಡಿಕೆ** ಎಂದು ನಮೂದಿಸಿ, ಕಾರ್ಯನಿರ್ವಾಹಕ ನಿರ್ದೇಶಕರ ವಿಳಾಸಕ್ಕೆ ಸ್ಪೀಡ್ ಪೋಸ್ಟ್ ಮೂಲಕ ಕಳುಹಿಸಬೇಕು. ಸ್ಪೀಡ್ ಪೋಸ್ಟ್ ಹೊರತುಪಡಿಸಿ ಯಾವುದೇ ಕೊರಿಯರ್ ಅಥವಾ ಇತರೆ ಖಾಸಗಿ ವ್ಯವಸ್ಥೆಗಳಿಂದ ಕಳುಹಿಸಲ್ಪಟ್ಟ ಅಥವಾ ಮುದ್ದಾಂ ಸಲ್ಲಿಸುವ ಕವರ್‌ಗಳಿಗೆ ಹಾಗೂ ಅಪೂರ್ಣ ವಿಳಾಸಗಳನ್ನು ಬರೆದಿರುವ ಲಕೋಟೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಜವಾಬ್ದಾರಿಯಾಗಿರುವುದಿಲ್ಲ. **ಕರ್ನಾಟಕ ಪರೀಕ್ಷಾ ಪ್ರಾಧಿಕಾರದ** ಕಛೇರಿಗೆ ಸ್ಪೀಡ್ ಪೋಸ್ಟ್ ಮೂಲಕ ಡಿಮ್ಯಾಂಡ್ ಡ್ರಾಫ್ಟ್ ಮತ್ತು ಸ್ವ-ವಿಳಾಸದ ಲಕೋಟೆಗಳನ್ನು ಕಳುಹಿಸಲು ಕೊನೆಯ ದಿನಾಂಕ **16-02-2009.**

## ಸಾಮಾನ್ಯ ಪ್ರವೇಶ ಪರೀಕ್ಷೆ - 2009ರ ವೇಳಾಪಟ್ಟಿ

| ದಿನಾಂಕ | ದಿನ | ಸಮಯ | ವಿಷಯ | ಅಂಕಗಳು |
|---|---|---|---|---|
| 29-04-2009 | ಬುಧವಾರ | ಬೆಳಿಗ್ಗೆ 10.30 ರಿಂದ 11.50 ರವರೆಗೆ | ಜೀವಶಾಸ್ತ್ರ | 60 |
| | | ಮಧ್ಯಾಹ್ನ 02.30 ರಿಂದ 03.50ರ ವರೆಗೆ | ಗಣಿತಶಾಸ್ತ್ರ | 60 |
| 30-04-2009 | ಗುರುವಾರ | ಬೆಳಿಗ್ಗೆ 10.30 ರಿಂದ 11.50 ರವರೆಗೆ | ಭೌತಶಾಸ್ತ್ರ | 60 |
| | | ಮಧ್ಯಾಹ್ನ 02.30 ರಿಂದ 03.50ರ ವರೆಗೆ | ರಸಾಯನಶಾಸ್ತ್ರ | 60 |
| 01-05-2009 | ಶುಕ್ರವಾರ | ಬೆಳಿಗ್ಗೆ 11.00 | ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಮಾತ್ರ | ಕನ್ನಡ ಭಾಷಾ ಪರೀಕ್ಷೆ |
| | | ಮಧ್ಯಾಹ್ನ 01.00 | ಹೊರನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಮಾತ್ರ | |

ಸರ್ಕಾರಿ ಸೀಟುಗಳನ್ನು ಪಡೆಯಲು ನಿಗದಿಪಡಿಸಿರುವ ವಿವಿಧ ಅರ್ಹತಾ ನಿಯಮಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಕ.ಪ.ಪ್ರಾ ವೆಬ್‌ಸೈಟ್ http://kea.kar.nic.in ನ್ನು ನೋಡಿರಿ.

**ಎಸ್.ಜಿ. ಹೆಗಡೆ ಭಾ.ಆ.ಸೇ.**
ಕಾರ್ಯನಿರ್ವಾಹಕ ನಿರ್ದೇಶಕರು

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012.
ದೂರವಾಣಿ: 080-23461575, 23462758, 23462599 ಫ್ಯಾಕ್ಸ್ : 080-23461576 ಇ-ಮೇಲ್: keauthority-ka@nic.in